ತಾರೀಖು 25ನೇ ಜನವರಿ 1889.

ನಂ. 190.—ಮೆ॥ ಬಿ. ತಿರುಮಲಾಚಾರ್ರವರು ಶಿವಮೊಗ್ಗಾ ಡಿಸ್ಟ್ರಿಕ್ಟು 2ನೇ ಅಸಿಸ್ಟೆಂಟ್ ಕಮ್ಮಿಷನರ ಆಫೀಸಿನ ಚಾರ್ಜನ್ನು ವಾಹೆ ಮಜಕೂರ್ 14ನೇ ತಾರೀಖಿನ ಮಧ್ಯಾನ್ಹದಲ್ಲಿ ಮೆ॥ ಜಲುವಯ್ಯಂಗಾರ್ರವರಿಗೆ ಬಿಟ್ಟುಸಿರುತ್ತಾರೆ.

ತಾರೀಖು 26ನೇ ಜನವರಿ 1889.

ಕ್ಯಾಂಪ್ ನಂ. 2014.—ಮೈಸೂರು ೀವೆಯ ಕಂಟ್ರೋಲರ್ ಮೆ॥ ಎ. ರಂಗಸ್ವಾಮಯ್ಯಂಗಾರ್ರವರಿಗೆ, 1889ನೇ ಇಸವಿ ಜನವರಿ 31ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು 12 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿದೆ ಯಿಧೆ.

ತಾರೀಖು 28ನೇ ಜನವರಿ 1889.

ನಂ. 189.—ಮೆ॥ ಪಂಚನಾಥರಾಯರು, ತುಮಕೂರ ಡಿಸ್ಟ್ರಿಕ್ಟು ಪೊಲೀಸ್ ಆಫೀಸಿನ ಚಾರ್ಜನ್ನು ಮೆ॥ ಆರ್. ನರಸಿಂಹ್ಯಯ್ಯಂಗಾರ್ರವರಿಗೆ ಮಾಹೆಮಜಕೂರ್ 14ನೇ ತಾರೀಖಿನ ಪೂರ್ವಾನ್ಹದಲ್ಲಿಬಿಟ್ಟುಸಿರುತ್ತಾರೆ.

ನಂ. 191.—ಶಿಕಾರಿಪುರದ ತಾಲ್ಲೂಕು ಅಮಲ್ದಾರ್ ನಾಗೇಶರಾಯರಿಗೆ, 1888ನೇ ಇಸವಿ ಅಕ್ಟೋಬರ್ 4ನೇ ಮುಕ್ತಂ 1347ನೇ ನಂಬರುಳ್ಳ ಇಸ್ತಿಹಾರಿನ ದೆಸೆಯಿಂದ ಕೊಡಲ್ಪಟ್ಟಿದ್ದ ಮೂರುತಿಂಗಳ ಪ್ರಿವಿಲೀಜ್ ರಜಾವನ್ನು ಸದರಿಯವರು 1888ನೇ ಅಕ್ಟೋಬರ್ 29ರ ಲಾಗಾಯತು ಉಪಯೋಗಿಸಿಕೊಂಡು ವಾಹೆಮಜಕೂರ್ ಜನವರಿ 7ನೇ ತಾರೀಖಿನ ಪೂರ್ವಾನ್ಹದಲ್ಲಿ ಪುನಶ್ಚ ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ಅವರು ಉಪಯೋಗಿಸಿಕೊಳ್ಳದೆ ಬಿಟ್ಟಿರುವ ರಜಾವನ್ನು ಇದರಿಂದ ರದ್ದು ಪಡಿಸಿರುತ್ತೆ.

ತಾರೀಖು 21ನೇ ಡಿಕಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ. ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂಬಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡಿಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫೀಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀವೆಟ್ಟಿಗೆಯು ದಿನವಹಿ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲವ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗೆದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಿಮೋಜೀಬ್ ಹಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟೆರಿ.

ದಿವಾನರವರು, ಅವರ ಭೇಟಿಮಾಡಲಿಚ್ಛೈಯುಳ್ಳ ದೊಡ್ಡಮನುಷ್ಯರುಗಳಿಸ್ಸು ಪ್ರತಿ ಶನಿವಾರ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ-ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಹುಕ್ಕುಂ ಬಿಮೋಜೀಬ್,
ಕೆ. ಬೊರಸಾಮಿಅಯ್ಯರ್,
ಪ್ರೈವೇಟ್ ಸೆಕ್ರಟೆರಿ.

ವಿದ್ಯಾಭ್ಯಾಸದ ಇಲಾಖೆ.

ತಾರೀಖು 17ನೇ ಜನವರಿ 1889ನೇ ಇಸವಿ.

ಮೈಸೂರು ದೇಶೀಯ್ಯ ಪರೀಕ್ಷೆ.

ಮೈಸೂರು ದೇಶೀ ಪರೀಕ್ಷೆಯು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂದರೆ ದ್ರಮುಖ ಸ್ಥಳದ ಸರ್ಕಾರೀ ಕಾಲೀಜ್ ಅಥವಾ ಹೈ ಸ್ಕೂಲಿನಲ್ಲಿಯೂ ಮತ್ತು ಬಂದು ವಿಶೇಷ ಸಂದರ್ಭದಿಂದ ಕಡೂರು ಡಿಸ್ಟ್ರಿಕ್ಟು ಯೆಡೆಹಳ್ಳಿಯಲ್ಲಿಯೂ ನಡಿಸಲ್ಪಡುವದು, ಸದರೀ ಪರೀಕ್ಷೆಯು ಸ್ರ್ 1889ನೇ ಇಸವಿ ಫಿಬ್ರವರಿ 18ನೇ ಸೋಮವಾರದ ದಿವಸ ಆರಂಭಿಸುತ್ತದೆ. ಪರೀಕ್ಷೆಯು ಇವರಡಿಕಂಡ ಕಾಲಕ್ರಮವಾಗಿ ನಡಿಸಲ್ಪಡುವದು.

ದಿವಸ.	ವಿದ್ಯಾರ್ಥಿಗಳ ಪರೀಕ್ಷೆ.		ಉಪಾಧ್ಯಾಯರ ಪರೀಕ್ಷೆ.	
	ಘಂಟೆ.	ಅಂಕಗಳು.	ಘಂಟೆ.	ಅಂಕಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ, ವ್ಯಾಕರಣ (ಆವಶ್ಯಕ ಭಾಷೆ.)	10ರಿಂದ 1ರವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 „ 5 „	ಡಿಟ್ಟೋ ಡಿಟ್ಟೋ (ಎರಡನೇ ಭಾಷೆ.)	2 „ 4 „	ವ್ಯಾಕರಣ.
			4 „ 5 „	ವಾಕ್ಯರಚನೆ.
ಎರಡನೇ ದಿವಸ.	10ರಿಂದ 11ರ ವರಿಗೆ.	ಬರವಣಿಗೆ ಅಕ್ಷರ ಸಂಯೋಜನ (ಆವಶ್ಯಕ ಭಾಷೆ.)	10ರಿಂದ1ರವರಿಗೆ,	ಚರಿತ್ರೆ.
	11 „ 1 „	ಚರಿತ್ರೆ).	2 „ 4 „	ರೇಖಾಗಣಿತ.
	2 „ 5 „	ಭೂಗೋಳ. ಭೂಪಠನಕ್ಷೆಬರಿಯುವಿಕೆ.		
ಮೂರನೇ ದಿವಸ.	10ರಿಂದ 12ರ ವರಿಗೆ.	ಅಂಕಗಣಿತ.	10ರಿಂದ 1ರವರಿಗೆ.	ಅಂಕಗಣಿತ.
	12ರಿಂದ 1 „	ಬರವಣಿಗೇ ಅಕ್ಷರನಸಂಯೋಜನ (ಎರಡನೇ ಭಾಷೆ.)	2 „ 4 „	ಬೀಜಗಣಿತ.
	2 „ 3. 30	ವೈದಸಾಯಭೋಧಿನಿ.		
	3. 30. 5 „	ಆರೋಗ್ಯಭೋಧಿನಿ.		
ನಾಲ್ಕನೇ ದಿವಸ.	10ರಿಂದ11-30ವರಿಗೆ	ಕ್ಷೇತ್ರಗಣಿತ.	10ರಿಂದ 1ರವರಿಗೆ.	ಭೂಗೋಳ.
	11. 30 „ 1	ಭಾಷಾಂತರ.	2 „ 5 „	ಶಾಸ್ತ್ರಪಾಠ.
	2 3. 30	ಹೊಲಿಗೆ.		
	3.30 5	ಪಾಕಶಾಸ್ತ್ರ).		
ಐದನೇ ದಿವಸ.	..	..	10ರಿಂದ1ರವರಿಗೆ	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಡಿ ನಮೂದಿಸಲ್ಪಟ್ಟ ಅಂಕಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರೀಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರೀಕ್ಷೆಯಾಗುವ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಒಂದಾವರ್ತಿ ಬಿಟ್ಟುಬಂದೆ ಅನಂತರ ಪುನಃ ಪ್ರವೇಸಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವುಂಟಾಗಲಾರದು, ಆಲ್ಲದೆ ತನ್ನ ವುತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷೆ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೇ ಕೊಠಡಿಯಿಂದ ಹೊರಗೆ ಕೊರಡಿಸಲ್ಪಡುವದಲ್ಲದೆ ಸದರಿ ಸಂಗತಿಯು ಡೈರೆಕ್ಟರ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

4. ಪರೀಕ್ಷೆ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ ರೂಲರುಗಳನ್ನಾಗಲಿ ಪುಸ್ತುಕಗಳನ್ನಾಗಲಿ ಬರದ ಕಾಗದಗಳನ್ನಾಗಲಿ ಅಥವಾ ಇನ್ಯಾವ ವಿಧವಾದ ಕಾಗದಪತ್ರವನ್ನಾಗಲಿ ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊರಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರಿ ನಡವಳಿಕೆಯು ಡೈರೆಕ್ಟರ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್‌ಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯ ಹೆಸರು ರಜಿಸ್ಟರ ನಂಬರ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಏವಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸ ಲ್ಪಟ್ಟಿರುತ್ತಾರೆ. "ವಿಚಿತ್ರ ಕೆಟ್ಟುಹೋದ ಕಾಗದ ವಗ್ಗೈರೆಗಳು" ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ಎಲ್. ರೈಸ್,
ಎಡ್ಯುಕೇಷನ್ ಸೆಕ್ರೆಟರಿ.

ಲೆಜಿಸ್ಲೇಟಿವ್ ಇಲಾಖಾ.

ತಾರೀಖು 19ನೇ ಡಿಸಂಬರ್ 1888.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡೆಂಬ 1888ನೇ ಇಸವಿ IVನೇ ನಂಬರ ರೆಗ್ಯುಲೇ ಷನಿನ ಇಂಗ್ಲಿಷ್ ಮತ್ತು ಕನ್ನಡ ಪ್ರತಿಗಳು ಪ್ರತಿ 1ಕ್ಕೆ ವಂದು ರೂಪಾಯಿ ಪ್ರಕಾರ ಬೆಂಗಳೂರಲ್ಲಿರತಕ್ಕ ಗವರ್ನಮೆಂಟ್ ಬುಕ್ಕು ಡಿಪೋದಲ್ಲಿ ಖರೀದಿಗೆ ದೊರೆಯುವವು.

ಯಸ್. ವೆಂಕಟವರದಯ್ಯಂಗಾರ್,
ಲೆಜಿಸ್ಲೇಟಿವ್ ಸೆಕ್ರೆಟರಿ.